## ಛಾಯಾಚಿತ್ರಕ್ಕೂ ವೇದಿಕೆ

ಇಂದಿನ ಕಾಲದಲ್ಲಿ ಬಹುತೇಕ ಎಲ್ಲ ಕಾರ್ಯಕ್ರಮದಲ್ಲೂ ಛಾಯಾಚಿತ್ರದ್ದೇ ಕಾರುಬಾರು. ಅದರಲ್ಲೂ ಮೊಬೈಲ್ ಬಂದ ಮೇಲಂತೂ ಎಲ್ಲರೂ ಛಾಯಾಚಿತ್ರಗಾರರೆ. ಹಾಗೆಯೇ ಮದುವೆ ಮನೆ ಇದಕ್ಕೆ ಹೊರತಲ್ಲ. ಇಲ್ಲಿ ಬಂಧು ಮಿತ್ರರು ಅಪರೂಪಕ್ಕೆ ಸಿಕ್ಕಾಗ ಇದಕ್ಕೊಂದು ಮೆರುಗು. ಆದರೆ ಇದು ಕಾರ್ಯಕ್ರಮಕ್ಕೆ ಕಿರಿಕಿರಿ. ಹಾಗಾದರೆ ಇದಕ್ಕೊಂದು ಪ್ರತ್ಯೇಕ ಜಾಗ ಇದ್ದರೆ ಹೇಗೆ? ಈ ಹಿನ್ನೆಲೆಯಲ್ಲಿ ಮೂಡಿಬಂದ ವೇದಿಕೆ ಇದು. ಈಚೆಗೆ ಶಿವಮೊಗ್ಗದ ಪರಿಚಿತರ ಮದುವೆಗೆ ಹೋದಾಗ ಕಂಡ ಚಿತ್ರ. ಕಲ್ಯಾಣ ಮಂಟಪದ ಪ್ರವೇಶದಲ್ಲಿ ಅದಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಗ್ರಾಮೀಣ ಮನೆಯ ಹಿನ್ನೆಲೆಯಲ್ಲಿ ಈ ವೇದಿಕೆಯನ್ನು ಸಿದ್ಧಪಡಿಸಲಾಗಿದೆ. ಚಿತ್ತಾರ ಶೈಲಿಯ ರಂಗೋಲಿ, ಕಿಟಕಿಯನ್ನು ಅದೇ ವಿನ್ಯಾಸದಲ್ಲಿ ಸಿದ್ಧ ಮಾಡಲಾಗಿದೆ. ಕಿಟಕಿಯಲ್ಲಿನ ಕಲಾತ್ಮಕ ಚಿತ್ರಕಲೆ ಸುಂದರವಾಗಿದೆ..

—ಶ್ರೀನಿವಾಸ ಮೂರ್ತಿ ಎನ್.ಎಸ್.





## ಶತಾಯುಷಿ ಗಂಟೆಯ ಗೆಳೆಯ

ಮೈಸೂರಿನ ಬೃಂದಾವನ ಬಡಾವಣೆಯ ಹಿರಿಯ ನಾಗರಿಕ ಪೂರ್ವಜರಿಂದ ಬಳುವಳಿಯಾಗಿ ಬಂದ ಈ ಟೇಬಲ್ ಗಡಿಯಾರ ಇನ್ನೂ ಸುಸ್ಥಿಯಲ್ಲಿದೆ. 'ಓಲ್ಡ್ ಈಸ್ ಗೋಲ್ಡ್' ನಾಣ್ಣುಡಿ ನೆನಪಿಸುವಂತಿದೆ. 1851 ರಲ್ಲಿ ಸ್ಥಾಪನೆಗೊಂಡ ಅಮೆರಿಕದ ಅನ್ಸೋನಿಯ ಕ್ಲಾಕ್ ಕಂಪನಿ ತಯಾರಿಸಿದ ಈ ಗಡಿಯಾರ ಸುಮಾರು 125 ವರ್ಷಗಳಷ್ಟು ಹಳೆಯದು. ತಾಮ್ರ, ಹಿತ್ತಾಳೆಗಳಿಂದ ನಿರ್ಮಿತವಾದ ಯಂತ್ರ ಹಾಗೂ ಬೀಟೆ ಮರದ ಕವಚ ಹೊಂದಿರುವ ಈ ಗಡಿಯಾರ ಇಂದಿಗೂ ಅರ್ಧ ಗಂಟೆ ಹಾಗೂ ಗಂಟೆಗೊಮ್ಮೆ ಶಬ್ದ ಮಾಡುತ್ತಾ ಕರಾರುವಕ್ಕಾಗಿ ಸಮಯ ತೋರಿಸುತ್ತಿದೆ. ಬ್ಯಾಟರಿ ಅಥವಾ ಇನ್ನಾವುದೇ ನಿರ್ವಹಣಾ ಖರ್ಚಿಲ್ಲ. ವಾರಕ್ಕೊಮ್ಮೆ ಕೀ ಕೊಟ್ಟರಾಯಿತು.

—ಎಚ್.ಎಸ್. ನಂದಕುಮಾರ್

## ಪಪ್ಪಾಯಿ ಕಲಾಕೃತಿ

ನಿಸರ್ಗದ ವಿಚಿತ್ರ ಸೃಷ್ಟಿಯಲ್ಲಿ ಪಪ್ಪಾಯಿಯೂ ಒಂದು. ಈ ಗಿಡವನ್ನು ಕಂಡರೆ ದಕ್ಷಿಣ ಕನ್ನಡ ಭಾಗದ ರೈತರಿಗೆ ಪ್ರೀತಿ ಇಲ್ಲ. ಇದು ಕಾಯಿ ಬಿಡುವುದಿಲ್ಲ ಎನ್ನುವುದೇ ಇದಕ್ಕೆ ಕಾರಣ. ಚಿತ್ರ ವಿಚಿತ್ರದ ಹೂ ಕಲಾಕೃತಿಯಂತೆ ಗೋಚರವಾಗುತ್ತದೆ!

ಇದರಲ್ಲಿ ಇಳಿ ಬಿದ್ದ ಪೊಳ್ಳು ಕೊಳವೆಯಲ್ಲಿ ಹೂಗಳು ಬಿಡುತ್ತವೆ. ಇದರಲ್ಲಿ ಕಾಯಿ ಆದರೂ ಆಗಬಹುದು. ಆಗದೆಯೂ ಇರಬಹುದು. ಒಂದು ವೇಳೆ ಕಾಯಿ ಬಿಟ್ಟರೆ ತೀರಾ ಚಿಕ್ಕ ಗಾತ್ರಕ್ಕೆ ಉದುರುತ್ತವೆ. ಹಾರ್ಮೋನ್ ವೈಪರೀತ್ಯದಿಂದ ಈ ರೀತಿಯ ಗಿಡ ಬೆಳೆಯುತ್ತವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಆರಂಭದಲ್ಲೇ ಗಿಡದ ತುದಿ ಭಾಗವನ್ನು ಕೈಯಲ್ಲೇ ಹಿಸುಕಿ ಹಾಕಿದರೆ ಆ ಗಿಡ ಹಣ್ಣು ಬಿಡುವ ಸಾಧ್ಯತೆ ಇರುತ್ತದೆ ಎನ್ನುವುದು ಕೆಲವು ಅನುಭವಿ ಕೃಷಿಕರ ಮಾತು.

—ಅರುಣ್ ಕಿಲ್ಲೂರು

